**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 70 ಪಿಬಿಎಸ್ 2003

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 24.8.2011

ಇಂದ:

**ಸರ್ಕಾರದ ಕಾರ್ಯದರ್ಶಿಗಳು,**
ಶಿಕ್ಷಣ ಇಲಾಖೆ,
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),
ಬೆಂಗಳೂರು.

ಇವರಿಗೆ:

1. ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು

2. ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ

3. ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಗುಲ್ಬರ್ಗಾ.

ಮಾನ್ಯರೆ,

**ವಿಷಯ:** ಸ್ವಇಚ್ಛೆಯಿಂದ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗಾವಣೆಗೊಂಡ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** ಅಪರ ಆಯುಕ್ತರು, ಸಾ.ಶಿ.ಇ., ಧಾರವಾಡ ರವರ ಪತ್ರ ಸಂಖ್ಯೆ: ಸಿ10/ಸುತ್ತೋಲೆ/ಪ್ರೌಶಾಅ/39/2009-10, ದಿನಾಂಕ: 5.4.2011

66554
2/9.

GT-1

50/2018

83(5)
13/9

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿ, ಆರ್ಥಿಕ ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

"ಸಂಖ್ಯೆ: ಆಇ 27 ಎಸ್‌ಆರ್‌ಪಿ 2003 ದಿನಾಂಕ: 10.8.2011

ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಸ್ವ ಇಚ್ಛೆಯಿಂದ ವರ್ಗಾವಣೆಗೊಂಡ ಶಿಕ್ಷಕರುಗಳು ಹಿಂದಿನ ಸೇವೆಯಲ್ಲಿ ಸಲ್ಲಿಸಿರುವ ಸೇವೆಯನ್ನು ಜೇಷ್ಠತೆಗಾಗಿ ಪರಿಗಣಿಸದೆ ಕಾಲಬದ್ಧ ಮುಂಬಡ್ತಿ/ಹಿರಿಯ ವೇತನ ಶ್ರೇಣಿ ಮತ್ತು ಹೆಚ್ಚುವರಿ ವೇತನ ಬಡ್ತಿಯ ಸೌಲಭ್ಯಕ್ಕಾಗಿ ಮಾತ್ರ ಪರಿಗಣಿಸುವಂತೆಯೂ ಹಾಗೂ ಈ ಸೌಲಭ್ಯವು ವೈಯಕ್ತಿಕವಾಗಿರುವುದರಿಂದ ಆ ಜೇಷ್ಠತಾ ಘಟಕದ ಹಿರಿಯ ನೌಕರರು ವೇತನ ಏರಿಕೆಗೆ ಅರ್ಹರಾಗುವುದಿಲ್ಲವೆಂದು ಆರ್ಥಿಕ ಇಲಾಖೆಯ ಸಹಮತದೊಂದಿಗೆ ದಿನಾಂಕ: 11.2.2011 ರಂದು ಪತ್ರ ಸಂಖ್ಯೆ: ಇಡಿ 70 ಪಿಬಿಎಸ್ 2003 ರಲ್ಲಿ ಶಿಕ್ಷಣ ಇಲಾಖೆಯು ನಿರ್ದೇಶನವನ್ನು ನೀಡಿದ್ದು, ಭವಿಷ್ಯಾವರ್ತಿಯಾಗಿ, ಆ ಪತ್ರ ಹೊರಡಿಸಿದ ದಿನಾಂಕದಿಂದಲೇ ಈ ಸೌಲಭ್ಯಗಳು ಕೂಡ ಜಾರಿಯಾಗತಕ್ಕದ್ದಾಗಿರುತ್ತದೆ.

ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಅಂದರೆ ಒಂದು ಜೇಷ್ಠತೆಯ ಘಟಕದಿಂದ ಬೇರೊಂದು ಜೇಷ್ಠತೆಯ ಘಟಕಕ್ಕೆ ವರ್ಗಾವಣೆ ಹೊಂದಿದಾಗ ನೌಕರರಿಗೆ ಯಾವ ಘಟಕದ/ಜಿಲ್ಲೆಯ ಹುದ್ದೆಯಲ್ಲಿ ಕಾಲಬದ್ಧ ಮುಂಬಡ್ತಿ/ಹಿರಿಯ ವೇತನ ಶ್ರೇಣಿ/ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗುತ್ತದೋ ಆ ಜಿಲ್ಲೆಯಲ್ಲಿ ವೇತನದ ಬಾಕಿಯನ್ನು ಕೂಡ ಪಾವತಿಸಬಹುದಾಗಿದೆ."

ಮೇಲ್ಕಂಡ ಆರ್ಥಿಕ ಇಲಾಖೆಯ ಅಭಿಪ್ರಾಯದಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವಂತೆ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ. ಪ್ರಭುಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ).

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ಸಿ3[5]ಪ್ರಾಶಿ:ಸಂಘ:ಬೇ:132:2002–03 ದಿನಾಂಕ:16ನೇ ಸೆಪ್ಟಂಬರ್ 2011

**: ಜ್ಞಾ ಪ ನ :**

ಸರ್ಕಾರದ ಆದೇಶ ಸಂಖ್ಯೆ:ಇಡಿ:70:ಪಿಬಿಎಸ್:2003, ದಿನಾಂಕ:24.08.2011ರ ಯಥಾ ಪ್ರತಿಯನ್ನು ರವಾನಿಸಿದೆ. ಈ ಬಗ್ಗೆ ನಿಯಮಾನುಸಾರ ಕ್ರಮ ವಹಿಸಲು ತಿಳಿಸಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

**ಇವರಿಗೆ:**

ರಾಜ್ಯದ ಎಲ್ಲಾ ಉಪನಿರ್ದೇಶಕರು[ಆಡಳಿತ],

**ಪ್ರತಿಯನ್ನು:**

*01.* ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
*02.* ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಇಂದಿರಾನಗರ, ಬೆಂಗಳೂರು.
*03.* ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ[ರಿ], ಗಾಂಧಿನಗರ, ಬೆಂಗಳೂರು–09.
*04.* ಕಛೇರಿ ಪ್ರತಿ.

ಪೂರ್ಣಿಮ. \\Typing3server\d\D\EST3\1107-2010.doc